ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು).—

ಅ) ತ್ಯಾಗಟೂರು ಗ್ರಾಮ ಸ್ಥಳಾಂತರಿಸುವ ೧೯ ಲಕ್ಷ ರೂ.ಗಳ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿರುವುದಿಲ್ಲ.

ಆ) ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನೆ, ಗೊರೂರು ಅವರಿಂದ ಹೆಚ್ಚಿನ ಸ್ಪಷ್ಟೀಕರಣ ಕೋರಲಾಗಿದೆ.

ಗ್ರಾನೈಟ್ ಕಲ್ಲು ತೆಗೆಯಲು ಅನುಮತಿ ಪಡೆದವರ ಸಂಖ್ಯೆ

೧೭೭ ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ರಾಜ್ಯದಲ್ಲಿ ಗ್ರಾನೈಟ್ ತೆಗೆಯಲು ಎಷ್ಟು ಜನ ಅನುಮತಿ ಪಡೆದಿದ್ದಾರೆ.

ಆ) ಇವರುಗಳು ಯಾವ ಯಾವ ಸ್ಥಳದಲ್ಲಿ ಗ್ರಾನೈಟ್ ತೆಗೆಯಲು ಅನುಮತಿ ತೆಗೆದುಕೊಂಡಿದ್ದಾರೆ

ಇ) ಅನುಮತಿ ಇಲ್ಲದೆ ರಾಜ್ಯದಲ್ಲಿ ಗ್ರಾನೈಟ್ ತೆಗೆಯುತ್ತಿರುವ ವಿಚಾರವು ನಿಜವೇ?

ಈ) ಹಾಗಿದ್ದಲ್ಲಿ ಆ ರೀತಿ ಅನಧಿಕೃತವಾಗಿ ಎಷ್ಟು ಜನ ಗ್ರಾನೈಟ್ ತೆಗೆಯುತ್ತಿದ್ದಾರೆ ಹಾಗೂ ಯಾವ ಯಾವ ಸ್ಥಳಗಳಲ್ಲಿ ತೆಗೆಯುತ್ತಿದ್ದಾರೆ,

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

ಅ) ಸರ್ಕಾರದ ನೋಟಿಫಿಕೇಶನ್ ಸಂಖ್ಯೆ ಸಿಐ ೩೦೪ ಎಂಆರ್‌ಸಿ ೮೭ ದಿನಾಂಕ ೨೨-೫-೧೯೮೦ರಲ್ಲಿ ಗ್ರಾನೈಟ್ ನೀತಿಯನ್ನು ಸಡಿಲಗೊಳಿಸಿದೆ, ಆದರಂತೆ ಇದುವರೆವಿಗೂ ಯಾರಿಗೂ ಗ್ರಾನೈಟ್ ತೆಗೆಯಲು ಅನುಮತಿ ನೀಡಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಹೌದು.

ಈ) ೩೦ ಕೊನ್ನೂರು, ಮರಲಚಿಕುಪ್ಪೆ ಹುಣಸನಹಳ್ಳಿ ತಟ್ಟಕೆರೆ (ಕನಕಪುರ ತಾಲ್ಲೂಕು)

ಕೊಡೆಕಲ್, ದೊನ್ನಾಯಿಕನಪುರ (ತುಮಕೂರು ತಾಲ್ಲೂಕು) ಮಾರನಹಳ್ಳಿ

(ನೆಲಮಂಗಲ ತಾಲ್ಲೂಕು ನಾಗರಹಟ್ಟಿ ಕಾವಲ್ (ತಿಪಟೂರು ತಾಲ್ಲೂಕು)

ಮಿನ್ಯಾಮ್, ಮಾರ್ತಳ್ಳಿ, ಫೊನ್ನಾಚಿ (ಕೊಳ್ಳೇಗಾಲ ತಾಲ್ಲೂಕು) ಪುಣಕನೂರು, ಚೆ.ಜಿ. ಪುರ (ಚಾಮರಾಜನಗರ ತಾಲ್ಲೂಕು) ಕುಕ್ಕನೂರು (ಯಲಬುರ್ಗ ತಾಲ್ಲೂಕು) ಹುಲಿಗೆರೆ (ಕಾಪ್ಪಗಿ ತಾಲ್ಲೂಕು. ಚಿಕ್ಕದೊಗಲಿ, ಹನುಮನಹಾಳ್, ಗುಗ್ಗಲಮಾರಿ (ಹುನಗುಂದ ತಾಲ್ಲೂಕು) ಉಡೆಗೋಲಂ, ನಿಟ್ಟೂರು (ಸಿರಗುಪ್ಪ ತಾಲ್ಲೂಕು) ಬೈಲೂರು (ಬಳ್ಳಾರಿ ತಾಲ್ಲೂಕು) ಮರಕೊಲ್ಲಿ (ಹಾಸನ ತಾಲ್ಲೂಕು) ಅಣ್ಣನಾಯಕನಹಳ್ಳಿ (ಅರಸಿಕೆರೆ ತಾಲ್ಲೂಕು) ಸಿರಿಯೂರ್ (ಬೇಲೂರು) ವೀರಲಗೊಲ್ಲಹಳ್ಳಿ (ಗೌರಿಬಿದನೂರು ತಾಲ್ಲೂಕು ಯಲ್ಲೋಡ್ ಕಂದರೆಡ್ಡಿಪಾಳ್ಯ, ಎಗ್ಗನಹಳ್ಳಿ (ಗುಡಿಬಂಡೆ ತಾಲ್ಲೂಕು) ಮಲ್ಲೆಹರವು (ವೊಳಕಾಲ್ಮೂರು ತಾಲ್ಲೂಕು)

ಕೈಗಾರಿಕೆದಾರರಿಗೆ ಸಹಾಯಧನ ಹಾಗೂ ಅಭಿವೃದ್ಧಿ ಸಾಲ ಬಾಕಿ

೧೭೮ ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಹಿಂದುಳಿದ ಪ್ರದೇಶ ಮತ್ತು ಅಭಿವೃದ್ಧಿ ಪ್ರದೇಶಗಳಲ್ಲಿ ಕೈಗಾರಿಕಾದಾರರಿಗೆ ಎಷ್ಟು ಮೊತ್ತದ ಸಹಾಯಧನ ಮತ್ತು ಅಭಿವೃದ್ಧಿ ಸಾಲ ಬಾಕಿ ಇದೆ.

ಆ) ಈ ಬಾಕಿ ಎಷ್ಟು ವರ್ಷಗಳಿಂದ ಇದೆ, ಹಾಗೂ ಈ ರೀತಿ ಬಾಕಿ ಹಣದಿಂದ ಮೇಲ್ಕಂಡ ಪ್ರದೇಶ ಪ್ರಾರಂಭ ಮಾಡಿರುವ ಕೈಗಾರಿಕೆಗಳಿಗೆ ಅಭಿವೃದ್ಧಿಗೆ ದಕ್ಕೆ ಆಗಿದೆಯೇ.

ಇ) ಹಾಗಿದ್ದಲ್ಲಿ ಅಂತಹ ಕೈಗಾರಿಕೆಗಳ ಸಂಖ್ಯೆ ಎಷ್ಟು?